# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಸೆಪ್ಟಂಬರ್ 2008 | ಆಂತರಿಕ ಪ್ರಸಾರಕ್ಕಾಗಿ ಮಾತ್ರ | ಸಂಪುಟ 1 ಸಂಚಿಕೆ 5


ಸೆಪ್ಟೆಂಬರ್ 2008

ಪ್ರೀತಿಯ ಸೋದರ–ಸೋದರಿಯರೆ,

ನಾವೆಲ್ಲರೂ ಲಕ್ನೋದಲ್ಲಿ ನಡೆದ ಪೂಜ್ಯಗುರುಗಳ ಜನ್ಮದಿನೋತ್ಸವದ ಗುಂಗಿನಲ್ಲೇ ಇದ್ದು, ಅದನ್ನೇ ಮೆಲುಕು ಹಾಕುತ್ತಿದ್ದೇವೆ. ಗುರುಗಳು ನೀಡಿರುವ ಆಧ್ಯಾತ್ಮಿಕ ಅನುಗ್ರಹ, ಶಬ್ದಗಳ ಅಳವಿಗೆ ಸಿಗದು. ಈ ಸಂಚಿಕೆಯ ವಿಶೇಷಾಂಶಗಳೆಂದರೆ ಭಂಡಾರವನ್ನು ಕುರಿತು ಒಂದು ಪ್ರತ್ಯೇಕ ವರದಿ, ವಿವಿಧ ಕೇಂದ್ರಗಳಿಗೆ ಗುರುಗಳ ಪ್ರವಾಸ, ಮೀರಟ್ ಆಶ್ರಮದ ಉಧ್ಘಾಟನೆ, ಅನೇಕ ತರಬೇತಿ ಕಾರ್ಯಕ್ರಮಗಳು ಹಾಗೂ ಮುಕ್ತ ಸಭೆಗಳು.

ವಿಶ್ವಸಂಸ್ಥೆ ಮತ್ತು ಶ್ರೀ ರಾಮಚಂದ್ರ ಮಿಷನ್ನಿನ ಜಂಟಿ ಆಶ್ರಯದಲ್ಲಿ ಏರ್ಪಾಡಾಗಿರುವ ಪ್ರಬಂಧ ಸ್ಪರ್ಧೆಯು ನಮ್ಮ ಆಶ್ರಮಗಳಲ್ಲಿ ಮತ್ತು ಭಾರತದಾದ್ಯಂತ ಇರುವ ಕೇಂದ್ರಗಳಲ್ಲಿ ನಡೆಯುತ್ತಿರುವ ಒಂದು ಪ್ರಧಾನ ಚಟುವಟಿಕೆಯಾಗಿದೆ.

ನವೆಂಬರ್ 2008ರ ಸಂಚಿಕೆಗೆ ಸುದ್ದಿ ಲೇಖನಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 10.10.2008. ವರದಿಯನ್ನು ಸಂದರ್ಭೋಚಿತವಾದ ಭಾವಚಿತ್ರಗಳೊಂದಿಗೆ ದಯವಿಟ್ಟು ನಿಮ್ಮ ವಲಯದ ಮುಖ್ಯಸ್ಥರ ಮೂಲಕ ಕಳುಹಿಸಿಕೊಡಿ.

ಎಖೋಸ್ ಇಂಡಿಯಾ ತಂಡ






## ಪೂಜ್ಯ ಗುರುಗಳ 81ನೇ ಜನ್ಮವಾರ್ಷಿಕೋತ್ಸವ – ಲಕ್ನೋ

ಜುಲೈ 20ರ ಸಂಜೆ ಗುರುಗಳು ಕೊಲ್ಕತದಿಂದ ವಿಮಾನದಲ್ಲಿ ಬಂದಿಳಿದ ಕ್ಷಣವೇ ಉತ್ಸವದ ವಾತಾವರಣ ಕಳೆಗಟ್ಟಿತು. ಪ್ರಪಂಚದಾದ್ಯಂತ ಸುಮಾರು 42000 ಅಭ್ಯಾಸಿಗಳು ಮತ್ತು ಮಕ್ಕಳು ಲಕ್ನೋ ಆಶ್ರಮದಲ್ಲಿ ಸೇರಿದ್ದರು. ಆಶ್ರಮ ಲಕ್ನೋದಿಂದ 25 ಕಿಮೀ ದೂರದಲ್ಲಿ ಹರ್ದೋಯ್ ಬೈಪಾಸ್ ರಸ್ತೆಯಲ್ಲಿದ್ದು, ಐ.ಐ.ಎಂ ಆವರಣಕ್ಕೆ ಸಮೀಪವಾಗಿದೆ.

ಜುಲೈ 23ರಂದು ಸತ್ಸಂಗದ ನಂತರ, ನವದೆಹಲಿ ವಿಶ್ವಸಂಸ್ಥೆ ಕಛೇರಿಯ ಶ್ರೀ ರಾಜೀವ್ ಚಂದ್ರನ್‌ರವರು ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಶಾಂತಿ, ಪ್ರಶಾಂತತೆ, ಸಮಾನತೆಯ ಮೌಲ್ಯಗಳು ಹಾಗು ಅನುಕೂಲ ವಂಚಿತರಾದವರ ವಿಶೇಷವಾಗಿ ಮಹಿಳೆಯರ – ಸಬಲೀಕರಣವನ್ನು ಆಧರಿಸಿದ ಸಹಸ್ರಮಾನ ವಿಕಾಸ ಗುರಿಗಳನ್ನು (ಯು.ಎನ್.ಎಂ.ಡಿ.ಜಿ) ಸಾಧಿಸುವಲ್ಲಿ ವಿಶ್ವಸಂಸ್ಥೆ ಏನು ಮಾಡುತ್ತಿದೆಯೆಂಬುದನ್ನು ಅವರು ತಿಳಿಸಿದರು.

ಅನಂತರ ಗುರುಗಳು ಒಂದು ಸ್ಮರಣೀಯ ಉಪನ್ಯಾಸವನ್ನು ನೀಡಿ, ಜಾತಿ, ಧರ್ಮ, ಭಾಷೆ ಮತ್ತು ರಾಷ್ಟ್ರೀಯತೆಯ ಕಟ್ಟುಪಾಡುಗಳ ಆಚೆಗೆ ತಲುಪಿ, ಶ್ರೀ ರಾಮಚ್ಂದ್ರ ಮಿಷನ್ ಸಂಸ್ಥೆಯು ಹೇಗೆ ಮನಗಳಲ್ಲಿ ಭ್ರಾತೃತ್ವವನ್ನು ಬೆಳೆಸುತ್ತಿದೆ ಎಂದು ವಿವರಿಸಿದರು. ಮಿಷನ್ನಿನಲ್ಲಿ ಈಗಾಗಲೇ ಎರಡು ಸಾವಿರ ವಿವಾಹಗಳು ನಡೆದಿದ್ದು, ಇದು ನವ ಮಾನವತೆಯ ಉದಯದ ನಾಂದಿಯಾಗಿದೆ.

ಗುರುಗಳು ಮಹಿಳೆಯರ ಸಬಲೀಕರಣ ಕೇವಲ ಪ್ರೀತಿಯಿಂದ ಮಾತ್ರ ಸಾಧ್ಯವೆಂದು ಒತ್ತುಕೊಟ್ಟು ಹೇಳಿದರು. "ಅವರನ್ನು ಪ್ರೀತಿಸಿ, ಅವರನ್ನು ಪೋಷಿಸಿ, ಅವರನ್ನು ರಕ್ಷಿಸಿ", ಎಂದು ನುಡಿದರು. ಭಾರತದಲ್ಲಿ ಹೊರಗಡೆ ಅವರು ತಮ್ಮ ಪತಿಗಿಂತ ಕೆಲ ಹೆಜ್ಜೆ ಹಿಂದೆಯೇ ನಡೆಯುವವರಾದರೂ, ಮನೆಯ ಒಳಗಡೆ ಅವರು ರಾಣಿಯರೇ ಸರಿ ಎಂದು ಅವರು ಹೇಳಿದರು.

ಜುಲೈ 24ರಂದು, ಗುರುಗಳು ಧ್ಯಾನಮಂದಿರದ ಒಳಗೆ ಪ್ರವೇಶ ಮಾಡುತ್ತಲೇ ಸೈನ್ಯದ ವಾದ್ಯಗೋಷ್ಠಿಯವರು ತಮ್ಮ ವಾದ್ಯಗಳಿಂದ ಜನ್ಮದಿನದ ಹಾಡನ್ನು ನುಡಿಸಿದರು. ಬೆಳಗಿನ ಸತ್ಸಂಗದ ಹಾಡುಗಳು ಮತ್ತು ಕವಿತಾವಾಚನಗಳು ಗುರುಗಳ ಮೇಲೆ ಪ್ರೇಮಧಾರೆಯನ್ನೇ ಸುರಿಸಿದವು.

ಧ್ಯಾನಮಂದಿರದ ವೇದಿಕೆಯ ಹಿಂಭಾಗದಲ್ಲಿ ಬಾಬೂಜಿ ಮಹಾರಾಜರ ಮತ್ತು ಚಾರೀಜಿಯವರ ಚಿತ್ರಗಳ ಅಂದವಾದ ಜೋಡಣೆಯಿದ್ದು 'ಎಂದೆಂದಿಗೂ ಜೊತೆಯಾಗಿ' ಎಂಬುದೇ ಅದರ ವಸ್ತು ವಿಷಯ. ಮೂರು ದಿನಗಳ ಉತ್ಸವದಲ್ಲಿ ನಡೆದ ಒಟ್ಟು ಮೂವತ್ತಾರು ವಿವಾಹಗಳಲ್ಲಿ, ಸಾಗರದಾಚೆಯ ದಂಪತಿಗಳು ಒಂಬತು ಮಂದಿಯಿದ್ದರು. ಈ ಸಂದರ್ಭದಲ್ಲಿ ಗುರುಗಳು ಅನೇಕ ಪುಸ್ತಕಗಳು, ಸಿಡಿ ಮತ್ತು ಡಿವಿಡಿಗಳನ್ನು ಬಿಡುಗಡೆ ಮಾಡಿದರು. "ಅವರು, ಹುಕ್ಕಾ ಮತ್ತು ನಾನು" ವಿನ ಮುಂದಿನ ಭಾಗವಾದ, ಗುರುಗಳ ಉಪನ್ಯಾಸಗಳ ಐದು ಡಿವಿಡಿಗಳನ್ನೊಳಗೊಂಡ 'ಹಬಲ್ ಬಬಲ್' ಸಹ ಬಿಡುಗಡೆಯಾಯಿತು.

ವರ್ಷಋತುವಾದ ಕಾರಣ ಮಳೆ ಬೀಳುತ್ತಿದ್ದರೂ, ಎಲ್ಲ ಕಡೆಯೂ ಮಳೆಯಿಂದ ರಕ್ಷಣೆ ಒದಗಿಸಿದ್ದರಿಂದ ಅಭ್ಯಾಸಿಗಳು ನಿರಾತಂಕವಾಗಿದ್ದರು. ಇದನ್ನು ಸಾಧ್ಯವಾಗಿಸಲು ಹಗಲು–ರಾತ್ರಿ ದುಡಿದ ಸಂಘಟಿಕರು ಮತ್ತು ಸ್ವಯಂಸೇವಕರನ್ನು ಗುರುಗಳು ಅಭಿನಂದಿಸಿದರು. ಸ್ವಯಂಸೇವಕರು ಲಕ್ಷ್ಯ ನೀಡಿದ ವಿವಿಧ ವಿಭಾಗಗಳೆಂದರೆ ಶಿಬಿರ, ಭದ್ರತೆ, ಸಾರಿಗೆ, ಪಾದರಕ್ಷೆ, ಶೌಚ ವ್ಯವಸ್ಥೆ, ವೈದ್ಯಕೀಯ, ವಿವಾಹ ವಿಭಾಗ, ಊಟೋಪಚಾರ, ಸಹಾಯ, ಚಿಣ್ಣರ ಕೇಂದ್ರ, ಜಲ ಪೂರೈಕೆ ಮತ್ತು ಗೃಹಕೃತ್ಯ ನಿರ್ವಹಣೆ. ಬ್ಯಾಂಕು ಮತ್ತು ಅಂತರ್ಜಾಲ ಸೌಲಭ್ಯಗಳೂ ಇದ್ದವು.

ಗುರುಗಳು ಸಂದರ್ಶಕರನ್ನು ಬರಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದರು ಹಾಗು ಪ್ರಪಂಚದೆಲ್ಲೆಡೆಯಿಂದ ಬಂದಿದ್ದ ಕಾರ್ಯಕರ್ತರೊಡನೆ ಮಿಷನ್ನಿನ ಆಡಳಿತಾತ್ಮಕ ವಿಷಯಗಳನ್ನು ಪರಿಶೀಲಿಸುತ್ತಿದ್ದರು. ಅವರು ಮಿಷನ್ನಿನ ಕಾರ್ಯಕಾರಿ ಸಮಿತಿಯೊಡನೆ ಮಿಷನ್ನಿನ ಚಟುವಟಿಕೆಗಳು ಮತ್ತು ಭವಿಷ್ಯಕ್ಕಾಗಿ ಯೋಜಿತ ಕಾರ್ಯಕ್ರಮಗಳನ್ನು ಪರಿಶೀಲಿಸಿದರು.

ಜುಲೈ 25ರಂದು ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟ ನಂತರ, ಭಕ್ತಿಗೀತೆಗಳ ಗಾಯನವಿತ್ತು. ತರುವಾಯ, ಮಿಷನ್ನಿನ ಕಾರ್ಯದರ್ಶಿ ಸೋದರ ಯು.ಎಸ್. ಬಾಜಪಾಯಿಯವರ ಸಮಾರೋಪ ಭಾಷಣದ ನಂತರ ಉತ್ಸವ ಔಪಚಾರಿಕವಾಗಿ ಸಮಾಪ್ತವಾಯಿತು.







## ಗುರುಗಳ ಪ್ರವಾಸ: ಜೂನ್-ಆಗಸ್ಟ್ 2008

### ಬೆಂಗಳೂರು

ತಮ್ಮ ಎರಡು ತಿಂಗಳ ಅವಧಿಯ ಯೂರೋಪ್ ಭೇಟಿ ಮುಗಿಸಿಕೊಂಡು ಗುರುಗಳು ಜೂನ್ 15, ಭಾನುವಾರದಂದು ದುಬೈನಿಂದ ಬೆಂಗಳೂರಿನಲ್ಲಿ ಬಂದಿಳಿದರು. ನೂತನ ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಬೆಂಗಳೂರು ಮತ್ತು ಸುತ್ತಮುತ್ತಲಿನ ಕೇಂದ್ರಗಳಿಂದ ಅಭ್ಯಾಸಿಗಳು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು.

ಗುರುಗಳು ನಿರ್ಮಾಣವಾಗುತ್ತಿರುವ ಲಾಲಾಜಿ ನಿಲಯದ (ಇದನ್ನು ಅವರು 'ಪರಂಧಾಮ'ವೆಂದು ಪುನರ್ನಾಮಕರಣ ಮಾಡಲಿದ್ದಾರೆ) ಧ್ಯಾನ ಮಂದಿರದಲ್ಲಿ ಸತ್ಸಂಗವನ್ನು ನಡೆಸಿ, ಮದುವೆಗಳನ್ನು ನಡೆಸಿಕೊಟ್ಟರು. ನಂತರ ಅವರು ಬೆಂಗಳೂರಿನ ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಅಭ್ಯಾಸಿಗಳ ಸೌಕರ್ಯಕ್ಕಾಗಿ ಇರುವ ಮೂರು ಆಶ್ರಮಗಳ ಬಗ್ಗೆ ಪ್ರಸ್ತಾಪಿಸಿದರು. ಒಂದು ಕಿರು ಭಾಷಣದಲ್ಲಿ ಸ್ವಯಂ ಶಿಸ್ತಿನ ಅವಶ್ಯಕತೆಯನ್ನು ತಿಳಿಸಿದರು. ಮುಂಬರುತ್ತಿರುವ "ಅವರು, ಹುಕ್ಕಾ ಮತ್ತು ನಾನು – ಭಾಗ 2 : ಹಬಲ್ ಬಬಲ್" ನ ಡಿವಿಡಿಗೆ ಪರಿಚಯದ ರೂಪದಲ್ಲಿ ಒಂದು ಭಾಷಣ ಮಾಡಿದರು.

ಜೂನ್ 20ರಿಂದ 26ರವರೆಗೆ ಕ್ರೆಸ್ಟ್‌ನಲ್ಲಿ ತಂಗಿದ್ದ ಗುರುಗಳನ್ನು ಭೇಟಿ ಮಾಡಲು ಕರ್ನಾಟಕದ ವಿವಿಧ ಕೇಂದ್ರಗಳಿಂದ ಅಭ್ಯಾಸಿಗಳ ಪ್ರವಾಹ ಹರಿದು ಬರುತ್ತಿತ್ತು. ಗುರುಗಳು ಎಸ್.ಎಂ.ಎಸ್.ಎಫ್. ಗ್ರಂಥಾಲಯದ ಚಂದಾದಾರರ ಕಾರ್ಡುಗಳನ್ನು ಬಿಡುಗಡೆ ಮಾಡಿದರು. ಈ ಕಾರ್ಡಿನಿಂದ ಎಸ್.ಎಂ.ಎಸ್.ಎಫ್ ನ ಯಾವುದೇ ಗ್ರಂಥಾಲಯಕ್ಕೆ ಪ್ರವೇಶ ಲಭ್ಯ. ಈ ಗ್ರಂಥಾಲಯಗಳಿಗಾಗಿ ವಿಶೇಷವಾಗಿ ಆಯ್ಕೆ ಮಾಡಲಾದ ಪುಸ್ತಕಗಳ ಉದ್ದೇಶವೆಂದರೆ ವಿಸ್ತಾರವಾದ ಜ್ಞಾನ ಮತ್ತು ಧರ್ಮಗಳ ಮತ್ತು ಆಧ್ಯಾತ್ಮದ ಬಗ್ಗೆ ಮಾಹಿತಿ ಎಂದು ಈ ಸಂದರ್ಭದಲ್ಲಿ ಅವರು ನುಡಿದರು.

ಫ್ರಾನ್ಸಿನಿಂದ ಬಂದು ಕ್ರೆಸ್ಟ್ ನಲ್ಲಿ ಪ್ರತಿಷ್ಠಾಪನೆ ಗೊಂಡ 250 ಕೆಜಿ ತೂಕದ ಗಂಟೆಯ ಸೂಕ್ಷ್ಮ ವಿಷಯಗಳಲ್ಲೂ ಗುರುಗಳು ತುಂಬ ಆಸ್ಥೆವಹಿಸಿದರು ಮತ್ತು ಅದರ ಉದ್ಘಾಟನೆಯನ್ನು ಸಂತೋಷದಿಂದ ಮಾಡಿದರು. ನಂತರ ರಸ್ತೆ ಪ್ರಯಾಣದ ಮೂಲಕ ನಾಟ್ರಂಪಲ್ಲಿ ತಲುಪಿ, ಅಲ್ಲಿ ಜೂನ್ 28ರ ರಾತ್ರಿ ಉಳಿದುಕೊಂಡು, ಆಮೇಲೆ ಚೆನ್ನೈಗೆ ಪ್ರಯಾಣ ಬೆಳೆಸಿದರು.

ಚೆನ್ನೈನಲ್ಲಿ ತಮ್ಮ ಪ್ರಿಯಗುರುಗಳನ್ನು ಎರಡೂವರೆ ತಿಂಗಳು ನಂತರ ನೋಡಲು ಪ್ರತೀಕ್ಷೆ ಮಾಡುತ್ತಿದ್ದ ಅಭ್ಯಾಸಿಗಳ ಒಂದು ಬೃಹತ್ ಸಮೂಹ ಅವರಿಗೆ ಸ್ವಾಗತ ಕೋರಿತು. ರಸ್ತೆ ಪ್ರಯಾಣದ ನಂತರವೂ, ಗುರುಗಳು ತಮ್ಮ ಕುಟೀರ ಪ್ರವೇಶ ಮಾಡುತ್ತಿದ್ದಂತೆ, ಅಭ್ಯಾಸಿಗಳೊಡನೆ ತಮ್ಮ ಸಮಯವನ್ನು ಕಳೆದರು.

ಜುಲೈ 6ರಂದು ಬೆಳಗಿನ ಸತ್ಸಂಗವಾಗುತ್ತಲೇ, 'ಅವರು, ಹುಕ್ಕಾ ಮತ್ತು ನಾನು' ವಿನ ತಮಿಳು ಆವೃತ್ತಿಯನ್ನು ಬಿಡುಗಡೆ ಮಾಡಿದರು. ಅಭ್ಯಾಸಿಗಳೊಡನೆ ಇರಲು ಅವರು ಯಾವಾಗಲೂ ಬಿಡುವು ಮಾಡಿಕೊಳ್ಳುತ್ತಿದ್ದರು. ಲಾಲಾಜಿ ಸ್ಮಾರಕ 'ಒಮೆಗಾ ಅಂತಾರಾಷ್ಟ್ರೀಯ ಶಾಲೆ'ಗೂ ಸಹ ಭೇಟಿ ನೀಡಿದರು. ಉತ್ತೀರ್ಣರಾಗಿ ಶಾಲೆಯನ್ನು ಬಿಡಲು ಸಿದ್ಧವಾಗಿರುವ ಮೊದಲ ತಂಡದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಚೆನ್ನಾಗಿ ವ್ಯಾಸಂಗ ಮಾಡಿರೆಂದೂ ಅವರು ಪ್ರೇರಣೆ ನೀಡಿದರು.













Bangalore



Naukuchiatal



Chennai



Satkhol



Shahjahanpur



Satkhol



Ghaziabad

ಗುರುಗಳು ಜುಲೈ 14ರಂದು ಕೊಲ್ಕತಗೆ ಪ್ರಯಾಣ ಬೆಳೆಸಿದರು. ಅಲ್ಲಿ ಜುಲೈ 18ರ ಗುರುಪೂರ್ಣಿಮೆಯಂದು ಅವರೊಡನೆ ಇರಲು ಭಾರತದಾದ್ಯಂತ ಅನೇಕ ಅಭ್ಯಾಸಿಗಳು ಬಂದು ನೆರೆದರು. ಅವರು ಜುಲೈ 20ರಂದು ಲಕ್ನೋ ಉತ್ಸವಕ್ಕೆಂದು ಹೊರಟರು.

ಉತ್ಸವದ ನಂತರ, ಗುರುಗಳು 28ರಂದು ಲಕ್ನೋವಿನಿಂದ ಷಹಜಹಾನಪುರಕ್ಕೆ ರಸ್ತೆ ಪ್ರಯಾಣ ಮಾಡಿ, ಅಲ್ಲಿ ಬಾಬೂಜಿಯವರ ಮನೆಗೆ ಬೇಟಿ ನೀಡಿ, ಅಲ್ಲಿದ್ದ ಕೆಲ ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಅನಂತರ, ಆಶ್ರಮಕ್ಕೆ ತೆರಳಿ ಸತ್ಸಂಗ ನಡೆಸಿ, ಮಧ್ಯಾಹ್ನ ರುದ್ರಪುರಕ್ಕೆ ಹೊರಡುವ ಮುನ್ನ ಅಭ್ಯಾಸಿಗಳ ಜೊತೆ ಕೆಲ ಸಮಯವನ್ನು ಕಳೆದರು.

29ರಂದು ನೌಕುಚಿಯಾತಲ್ ನಲ್ಲಿ ಸ್ವಲ್ಪ ವಿಶ್ರಾಂತಿ ಪಡೆದ ನಂತರ, ಗುರುಗಳು ಮಧ್ಯಾಹ್ನ 3.30ಕ್ಕೆ ಸತ್ಖೋಲ್ ತಲುಪಿದರು.

30ರಂದು, ಅವರು ಬೆಳಗಿನ ಸತ್ಸಂಗ ನಡೆಸಿ ನಂತರ ಸೋದರರೊಬ್ಬರು ಹಾಡಿದ ಒಂದು ಸುಂದರ ಗೀತೆಯನ್ನು ಆಲಿಸಿದರು. ಇದು ಗುರುಗಳು ಸತ್ಖೋಲಿಗೆ ನೀಡಿದ ಒಂದು ಅಲ್ಪಾವಧಿ ಭೇಟಿಯಾಗಿದ್ದು, ಅಲ್ಲಿಂದ ಅವರು ದಾರಿಮಧ್ಯೆ ರುದ್ರಪುರ ಮತ್ತು ಮೊರಾದಾಬಾದಿನಲ್ಲಿ ನಿಂತು ಮೀರಟ್‌ಗೆ ತೆರಳಿದರು.

## ಗುರುಗಳಿಂದ ಮೀರಟ್ ಆಶ್ರಮದ ಉದ್ಘಾಟನೆ

ಆಗಸ್ಟ್ 1ರಂದು ಸತ್ಪೋಲಿನಿಂದ ದೆಹಲಿಗೆ ಹಿಂತಿರುಗಿ ಹೋಗುವಾಗ, ಗುರುಗಳು ಬಳಸು ದಾರಿ ಹಿಡಿದು ಒಂದು ಸಣ್ಣ ತಂಡದೊಡನೆ ಅಲ್ಪಾವಧಿ ಭೇಟಿಗೆಂದು ಮೀರಟ್ ಕೇಂದ್ರಕ್ಕೆ ತೆರಳಿದರು. ಮೊರಾದಾಬಾದಿನಲ್ಲಿ ಉಪಾಹಾರ ಮುಗಿಸಿ, ಹೊಸ ಧ್ಯಾನ ಮಂದಿರ ಮತ್ತು ಗುರುಕುಟೀರಗಳ ಉದ್ಘಾಟನೆಗೆ ಸಿದ್ಧವಾಗಿ ನಿಂತಿದ್ದ ಮೀರಟ್ ಆಶ್ರಮಕ್ಕೆ ಬಂದರು. ಗುರುಗಳು ಪಟ್ಟಿ ಕತ್ತರಿಸಿ, ಉದ್ಘಾಟನಾ ಫಲಕವನ್ನು ಅನಾವರಣಗೊಳಿಸಿ, ನೂತನ ಆಶ್ರಮವನ್ನು ಬಾಬೂಜಿ ಮಹಾರಾಜರಿಗೆ ಅರ್ಪಿಸಿದರು. ಸತ್ಸಂಗ ನಡೆಸಿ, ನೆರೆದಿದ್ದ 1500 ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರು ವಿನೋದವಾಗಿ ರಾವಣನ ಪತ್ನಿ ಮಂಡೋದರಿ ಮೀರಟ್‌ನವಳೆಂದು, ರಾಕ್ಷಸ ಕುಟುಂಬದಲ್ಲಿದ್ದರೂ ಸಹ, ಆಕೆ ಒಳ್ಳೆಯ ಸ್ತ್ರೀಯಾಗಿದ್ದಳು ಎಂದರು. ಅವರ ಉಪನ್ಯಾಸದ ಮುಖ್ಯಾಂಶಗಳೆಂದರೆ

- ನಾವು ನಿಶ್ಶಬ್ಧತೆ ಕಾಪಾಡುವ ದೃಢ ನಿರ್ಧಾರ ಮಾಡಬೇಕು. ಅದು ಒಳ ಜಗಳವನ್ನು ಕಡಿಮೆ ಮಾಡುತ್ತದೆ.
- ಅಂತರಂಗದ ಅಥವಾ ಬಹಿರಂಗದ ನಿರ್ಮಾಣ ಮಾಡಿ – ಎರಡನ್ನೂ ಮಾಡುವುದು ಸಾಧ್ಯವಿಲ್ಲ
- ಕಡೆಯ ಪಕ್ಷ ಏನನ್ನು ಮಾಡಬಾರದೆಂಬುದನ್ನು ನಾವು ನಿರ್ಧರಿಸಬೇಕು.
- ಪತಿ ಪತ್ನಿಯರ ನಡುವೆ ಪವಿತ್ರಗಳಿಕೆ ಮತ್ತು ಆಧ್ಯಾತ್ಮಿಕ ಸಂಬಂಧಗಳು ಅತ್ಯಾವಶ್ಯಕ.

ಅಭ್ಯಾಸಿಗಳು ಜಾತಿ ಸೂಚಕ ಹೆಸರುಗಳನ್ನು ಕಾನೂನು ಬದ್ಧವಾಗಿ ತೆಗೆದುಹಾಕಿ, ತಮಗೆ ತಿಳಿಸಬೇಕೆಂದು ಗುರುಗಳು ಹೇಳಿದರು. ಬಾಬೂಜಿ ಮಹಾರಾಜರೂ ಸಹ ತಮ್ಮ ಜಾತಿ ಸೂಚಕ ಹೆಸರನ್ನು ಒಂದು ಘಟ್ಟದಲ್ಲಿ ತೆಗೆದು ಹಾಕಿದರು ಎಂಬುದನ್ನು ನೆನಪಿಸಿದರು. ಮಧ್ಯಾಹ್ನ ಗುರುಗಳು ರಸ್ತೆ ಪ್ರವಾಸ ಮಾಡಿ ದೆಹಲಿಗೆ ತೆರಳಿದರು.











# ಪ್ರಕಟಣೆಗಳು
## ಹೊಸ ಬಿಡುಗಡೆ




### ಹಬಲ್–ಬಬಲ್

ಇದು ಈ ವರ್ಷದ ವಿಶೇಷ ಬಿಡುಗಡೆ. "ಅವರು, ಹುಕ್ಕ ಮತ್ತು ನಾನು" – ಇದರ ಮುಂದುವರಿದ ಭಾಗವಾಗಿ ಗುರುಗಳು ನೀಡಿದ ಉಪನ್ಯಾಸಗಳು ಇದರಲ್ಲಿವೆ.

ಗುರುಗಳು ಹೇಳಿರುವಂತೆ, ನಮ್ಮ ಎಲ್ಲ ಅಭ್ಯಾಸಿಗಳಿಗೆ ನನ್ನ ಒತ್ತಾಯಪೂರ್ವಕ ವಿನಂತಿ ಎಂದರೆ, ನಮ್ಮ ಪ್ರತೀಕ್ಷೆ ಮಾಡುತ್ತಿರುವ ಆ ಬೃಹತ್ತಿನ, ಮಹಾರಣ್ಯದ ಕರೆಗೆ ಸ್ಪಂದಿಸಿ. ಅಲ್ಲಿ ಏನೂ ಇಲ್ಲ–ನೋಡಲೂ ಏನೂ ಇಲ್ಲ, ಬಯಸುವುದು ಏನೂ ಇಲ್ಲ, ಅಪೇಕ್ಷಿಸುವುದು ಏನೂ ಇಲ್ಲ, ಸಾಧಿಸುವುದು ಏನೂ ಇಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಕಳೆದುಕೊಳ್ಳುವುದು ಏನೂ ಇಲ್ಲ. ಆ ಕರೆಗೆ ನಾವು ಓಗೊಡುವವರೆಗೆ, ಗಡ್ಡ ಗಡ್ಡವೇ, ಹುಕ್ಕ ಹುಕ್ಕವೇ ಮತ್ತು ಹೊಗೆಯು ಹೊಗೆಯಷ್ಟೆ. ನಾವಿಲ್ಲವೆಂದಮೇಲೆ ಅದು ಹುಬಲ್–ಬಬಲ್(ಗುಡು ಗುಡು) ಅಷ್ಟೆ.


ಐದು ಡಿವಿಡಿಗಳ ಜೊತೆಗೆ ಅವುಗಳ ಲಿಪ್ಯಂತರ ಒಂದು ಪುಸ್ತಕರೂಪದಲ್ಲಿ ಲಭ್ಯವಾಗಿದ್ದು, ಎಲ್ಲವನ್ನು ಸುಂದರವಾದ ಹೊದಿಕೆಯಲ್ಲಿಟ್ಟು ಕೊಡಲಾಗುತ್ತಿದೆ.

### ಡಿವಿಡಿ ಸೆಟ್: ಜುಲೈ 2008



ಇದರಲ್ಲಿ ಗುರುಗಳು 2005–2007ರ ಅವಧಿಯಲ್ಲಿ ವ್ರಾಡ್ಸ್–ಡೆನ್ಮಾರ್ಕ್, ಚೆನ್ನೈ, ಬೆಂಗಳೂರು, ತಿರುಪ್ಪೂರುಗಳಲ್ಲಿ ನೀಡಿದ ಉಪನ್ಯಾಸಗಳ ಸಂಗ್ರಹವಿದೆ.

### ಹಿಂದಿ ಭಾಷೆಯಲ್ಲಿ ಬಿಡುಗಡೆಗಳು



ಗುರುಗಳ ಉಪನ್ಯಾಸಗಳನ್ನೊಳಗೊಂಡ ಎರಡು ಶ್ರವಣ ಸಿಡಿಗಳು ಲಕ್ನೋ ಉತ್ಸವದಲ್ಲಿ ಬಿಡುಗಡೆಯಾಯಿತು.


ಭಾಗ 1ರಲ್ಲಿ 1985ರಿಂದ 1996ರವರೆಗೆ ನೀಡಿದ 14 ಉಪನ್ಯಾಸಗಳಿವೆ. ಪ್ರೇಮ್ ಹೀ ಈಶ್ವರ್ ಹೈ (ಪ್ರೇಮವೇ ಪರಮಾತ್ಮ) ಎಂಬ ದೃಶ್ಯ ಸಿಡಿಯಲ್ಲಿ 1993–94ರಲ್ಲಿ ಗಾಜ್ಹಿಯಾಬಾದ್, ಕೋಟ, ಬೆಹಜ್ ಮತ್ತು ಇಂದೋರಿನಲ್ಲಿ ನೀಡಿದ ಉಪನ್ಯಾಸಗಳ ಸಂಗ್ರಹವಿದೆ.

### ಗುರುಗಳ ಆಯ್ಕೆ

ಇದು ಸಂಗೀತ ಪ್ರತಿಭೆಯುಳ್ಳ ನಮ್ಮ ಸೋದರ ಸೋದರಿಯರು ಹಾಡಿದ ಗೀತ ಸಂಗ್ರಹ. ಈ ಸಂಚಿಕೆಯಲ್ಲಿ ಎರಡು ಸಿಡಿಗಳಿವೆ.

### ಹೃದಯವಾಣಿ 2007

ಗುರುಗಳು 2007 ರಲ್ಲಿ ಭಾರತ ಮತ್ತು ವಿದೇಶದಲ್ಲಿ ನೀಡಿದ ಉಪನ್ಯಾಸಗಳ ಸಂಪೂರ್ಣ ಸಂಗ್ರಹ ಇದರಲ್ಲಿದೆ. ಇದರ ಒಂದು ಭಾಗದಲ್ಲಿ, ಗುರುಗಳು 2006 ಮತ್ತು 2007 ರಲ್ಲಿ ಅಭ್ಯಾಸಿಗಳೊಡನೆ ನಡೆಸಿದ ಅನೌಪಚಾರಿಕ ಸಂವಾದಗಳೂ ಇವೆ.



# ಎಖೋಸ್ ಇಂಡಿಯ

ಎಸ್ ಆರ್ ಸೀ ಎಮ್

ಸೆಪ್ಟೆಂಬರ್ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 5


## ಉತ್ತರಖಂಡ: ಮೌ.ಆ.ಶಿ. ಶಿಕ್ಷಕರಿಗೆ ತರಬೇತಿ

ಜೂನ್ 28–29ರಂದು ಡೆಹರಾಡೂನ್ ಆಶ್ರಮದಲ್ಲಿ ನಡೆದ ಈ ತರಬೇತಿ ಕಾರ್ಯಕ್ರಮದಲ್ಲಿ ಉತ್ತರಖಂಡದಿಂದ 70 ಮತ್ತು ಉತ್ತರಪ್ರದೇಶದಿಂದ 9 ಅಭ್ಯಾಸಿಗಳು ಭಾಗವಹಿಸಿದ್ದರು.

ಉತ್ತರಖಂಡದ ವಲಯ ಮುಖ್ಯಸ್ಥ ಸೋದರ. ಎಮ್.ಎಲ್. ಮಿತ್ತಲ್ ಸ್ವಾಗತ ಕೋರಿದರು. ಸೋದರಿ ನೀರಾ ರಘುವಂಶಿ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲಿದರು ಮತ್ತು ಸಹಜಮಾರ್ಗ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಹೊರತಂದಿರುವ ಮೌ.ಆ.ಶಿ ಕುರಿತ ಶಿಕ್ಷಕರ ಮಾರ್ಗದರ್ಶಿಯನ್ನು ಉಲ್ಲೇಖಿಸಿದರು.

ಡೆಹರಾಡೂನ್ ಕೇಂದ್ರದ ಸೋದರ ಆರ್.ಎಸ್. ಚೌಹಾನ್‌ರವರು ಮಾತನಾಡಿ ಮೌ.ಆ.ಶಿ ವನ್ನು ಶಾಲೆಗಳಲ್ಲಿ ಬೋಧಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದ್ದು, ಈ ದಿಶೆಯಲ್ಲಿ ಅಭ್ಯಾಸಿಗಳನ್ನು ಶಿಕ್ಷಕರನ್ನಾಗಿ ತರಬೇತುಗೊಳಿಸುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದ ಪ್ರಮುಖಾಂಶವೆಂದರೆ ಸೋದರಿಯರಾದ, ಚಂದ್ರಕಾಂತ ಮತ್ತು ಪ್ರೀತಿಯವರು ಪ್ರದರ್ಶಿಸಿದ ಪ್ರಾತ್ಯಕ್ಷಿಕೆಗಳು. ಅವರು ತರಗತಿಯಲ್ಲಿ ಮೌ.ಆ.ಶಿ ವನ್ನು ಘಟಕಗಳು, ಕತೆಗಳು, ಉದಾಹರಣೆಗಳು ಮತ್ತು ಚಟುವಟಿಕೆಗಳನ್ನು ಬಳಸಿಕೊಂಡು ಹೇಗೆ ಬೋಧಿಸುವುದೆಂದು ತೋರಿಸಿಕೊಟ್ಟರು. ಶಿಕ್ಷಕವರ್ಗದಲ್ಲಿ ಸೋದರ ಜಿ.ಡಿ. ಸರಿನ್ ಮತ್ತು ರಮೇಶ್ ದಳಕೋಟೆ ಸಹ ಉಪಸ್ಥಿತರಿದ್ದರು.

ಚಹಪಾನದ ನಂತರ ತಂಡದ ಚಟುವಟಿಕೆಗಳು ಪ್ರಾರಂಭವಾದಾಗ, ಕೆಳಕಂಡ ತಂಡಗಳನ್ನು ರಚಿಸಲಾಯಿತು.

ತಂಡ–1: ಮೌ.ಆ.ಶಿ ವನ್ನು ತರಗತಿಗಳಲ್ಲಿ ಕಲಿಸಲಿಚ್ಛಿಸುವ ಸ್ವಯಂಸೇವಕರು.

ತಂಡ–2: ಶಿಕ್ಷಕರೊಡನೆ ವೈಯಕ್ತಿಕವಾಗಿ ಮೌ.ಆ.ಶಿ ದ ಬಗ್ಗೆ ಚರ್ಚಿಸುವ ಸ್ವಯಂ ಸೇವಕರು

ತಂಡ–3: ಮೌ.ಆ.ಶಿ ದ ಬಗ್ಗೆ ಶಿಕ್ಷಕರ ತಂಡಗಳಿಗೆ ಮತ್ತು ಅಭ್ಯಾಸಿಗಳಿಗೆ ತರಬೇತಿ ನೀಡುವ ಸ್ವಯಂ ಸೇವಕರು.

ತಂಡ–4: ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರೊಡನೆ ಮೌ.ಆ.ಶಿ ವನ್ನು ಚರ್ಚಿಸುವವರು

ಪ್ರತಿಯೊಬ್ಬ ಅಭ್ಯಾಸಿಗೂ ತೀರ್ಪುಗಾರರ ತಂಡ ಮತ್ತು ಇತರರ ಸಮ್ಮುಖದಲ್ಲಿ ತಮ್ಮ ಪಾತ್ರವನ್ನು ಕೆಲನಿಮಿಷಗಳವರೆಗೆ ನಿರ್ವಹಿಸಿ ತೋರಿಸುವ ಅವಕಾಶವನ್ನು ನೀಡಲಾಯಿತು.

ಕಾರ್ಯಕ್ರಮವನ್ನು ಮುಕ್ತಾಯಗೊಳಿಸುತ್ತ ಸೋ.ಎಮ್.ಎಲ್.ಮಿತ್ತಲ್ ರವರು ಎಲ್ಲಾ ಶಿಕ್ಷಕರಿಗೂ ಮತ್ತು ಸಹಭಾಗಿಗಳಿಗೂ ವಂದನೆಗಳನ್ನು ಅರ್ಪಿಸಿ, ಅವರೆಲ್ಲರೂ ಮೌ.ಆ.ಶಿ ಕಾರ್ಯವನ್ನು ಗುರುಗಳ ಅಪೇಕ್ಷೆಯ ಮೇರೆಗೆ ಮುಂದುವರಿಸಿಕೊಂಡು ಹೋಗುವರೆಂಬ ಆಶಯ ವ್ಯಕ್ತ ಪಡಿಸಿದರು.







## ಪ್ರಬಂಧ ಲೇಖನ

ಶ್ರೀ ರಾಮ ಚಂದ್ರ ಮಿಷನ್ ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು ಡಿಸೆಂಬರ್ 2005ರಿಂದ ವಿಶ್ವಸಂಸ್ಥೆಯ ಸಾರ್ವಜನಿಕ ಮಾಹಿತಿ ಇಲಾಖೆಯೊಡನೆ ಸಹಯೋಗ ಹೊಂದಿದೆ. ಈ ಸಹಯೋಗದಲ್ಲಿ ವಿಶ್ವಸಂಸ್ಥೆಯ ಉದ್ದೇಶ ಮತ್ತು ಚಟುವಟಿಕೆಗಳು ಮತ್ತು ಜಾಗತಿಕ ಸಮಸ್ಯೆಗಳನ್ನು ಕುರಿತು ಮಾಹಿತಿಯ ಪ್ರಸಾರ ಮಾಡಲು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಿಷನ್ನಿಗೆ ಒಂದು ಬದ್ಧತೆ ಇದೆ.

ಆಗಸ್ಟ್ 12ರಂದು ನಡೆಸಲ್ಪಟ್ಟ ವಿಶ್ವ ಸಂಸ್ಥೆಯ ಅಂತರಾಷ್ಟ್ರೀಯ ಯುವ ದಿನದ ಅಂಗವಾಗಿ, ದೇಶದಾದ್ಯಂತ ಶಾಲಾ ಕಾಲೇಜುಗಳಲ್ಲಿ ಶ್ರೀ ರಾಮ ಚಂದ್ರ ಮಿಷನ್ನಿನ ಆಶ್ರಯದಲ್ಲಿ ಅಖಿಲ ಭಾರತ ಪ್ರಬಂಧ ಸ್ಪರ್ಧೆ ಸಂಯೋಜಿಸಲಾಗಿದೆ.

ಹಿರಿಯರ ವಿಭಾಗಕ್ಕೆ (17–24 ವರ್ಷ) ವಿಷಯ: 'ಆತ್ಮಗೌರವ ಮತ್ತು ಆತ್ಮವಿಶ್ವಾಸಗಳು ಚಾರಿತ್ರ್ಯವನ್ನು ರೂಪಿಸಬಲ್ಲುದು'. ಕಿರಿಯರ ವಿಭಾಗಕ್ಕೆ(10–16 ವರ್ಷ) ವಿಷಯ: 'ಸತ್ಯವೇ ಧೈರ್ಯ'.

ಈ ಪ್ರಬಂಧ ಲೇಖನಕ್ಕೆ ಕೊನೆಯ ದಿನಾಂಕ ಆಗಸ್ಟ್ 31.

## ಗುಲ್ಬರ್ಗ– ಕರ್ನಾಟಕ



ಗುಲ್ಬರ್ಗ ಆಶ್ರಮದಲ್ಲಿ ಗುರುಕುಟೀರದ ಎದುರಿನ ಹುಲ್ಲು ಹಾಸಿನ ಮೇಲೆ ಅಭ್ಯಾಸಿಗಳು ಮಕ್ಕಳಿಗಾಗಿ ಜುಲೈ 6ರಂದು ಒಂದು ಪ್ರಬಂಧ ಸ್ಪರ್ಧೆ ಏರ್ಪಾಡಾಗಿತ್ತು. ಲೇಖನದ ವಿಷಯವೆಂದರೆ "ಮಕ್ಕಳು ತಮ್ಮ ಮಾತಾ ಪಿತೃಗಳಲ್ಲಿ, ಬಂಧುಗಳಲ್ಲಿ ಸಹಜಮಾರ್ಗ ಸೇರಿದ ನಂತರ ಕಂಡ ಬದಲಾವಣೆಗಳೇನು?". ವಿವಿಧ ವಯೋಮಾನದ 11 ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ಇದು ಸಣ್ಣದಾಗಿ ಆರಂಭವಾಗಿದ್ದು, ಒಂದು ಚಿತ್ರ ರಚನಾ ಸ್ಪರ್ಧೆಯನ್ನು ಯೋಜಿಸಲಾಗಿದೆ.

## ನಂಜನಗೂಡು– ಕರ್ನಾಟಕ

ಮೈಸೂರು ಸಮೀಪ ದೇವಾಲಯಗಳ ಊರಾದ ನಂಜನಗೂಡಿನ ಅಭ್ಯಾಸಿಗಳು, ಅಖಿಲ ಭಾರತ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳ ಸಹಯೋಗಕ್ಕಾಗಿ ಸ್ಥಳೀಯ ಶಾಲೆಗಳಿಗೆ ನೀಡಿದ ಭೇಟಿ ಅವರಿಗೆ ಉಲ್ಲಾಸಕರ ಅನುಭವ ತಂದಿತು. ಅವರ ಪ್ರಯತ್ನದ ಫಲವಾಗಿ ಜುಲೈ 13ರಂದು, 13 ಶಾಲೆಗಳಿಂದ 105 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು. ಲೇಖನಗಳನ್ನು ಶಿಕ್ಷಕ ವೃತ್ತಿಯಲ್ಲಿರುವ ಸ್ಥಳೀಯ ಅಭ್ಯಾಸಿಗಳು ಮೌಲ್ಯಮಾಪನ ಮಾಡಿದರು. ವಿಜೇತ ವಿದ್ಯಾರ್ಥಿಗಳಿಗೆ ಅವರ ಶಾಲೆಗಳಲ್ಲಿ ಬಹುಮಾನಗಳನ್ನು ಮಿಷನ್ನಿನ ಪುಸ್ತಕ ರೂಪದಲ್ಲಿ ಕೊಡಲಾಯಿತು.





## ಕೇಂದ್ರದ ಏಳಿಗೆಗೆ ನಾನು ಹೇಗೆ ನೆರವಾಗಬಹುದು?

ಆಗಸ್ಟ್ 10, 2008ರಂದು ಈ ಪ್ರಶ್ನೆಯನ್ನು ಇಂದೋರ್ ಕೇಂದ್ರದ ಅಭ್ಯಾಸಿಗಳ ಮುಂದಿಡಲಾಯಿತು. ಇತ್ತೀಚಿನ ಲಕ್ನೋ ಉತ್ಸವದಲ್ಲಿ ಅವರ ಹಾಜರಿಯು ಅವರನ್ನು ಉತ್ಸುಕರನ್ನಾಗಿ ಮಾಡಿತ್ತು ಹಾಗೂ ಸುಮಾರು 125 ಜನ ಉತ್ಸಾಹದಿಂದ ಈ ವಿಷಯದ ಬಗ್ಗೆ ಚರ್ಚಿಸಿದರು.

"ಪ್ರಗತಿ" ಯ ಅರ್ಥವೇನು?

–ಸಂಖ್ಯಾ ಹೆಚ್ಚಳಕ್ಕಿಂತ ಒಬ್ಬ ಅಭ್ಯಾಸಿಯ ವೈಯಕ್ತಿಕ ಬೆಳವಣಿಗೆ ಮತ್ತು ಅವನ ಪರಿವರ್ತನೆಯೇ ಮುಖ್ಯ.

–ಸ್ವಯಂ ಸೇವೆಯಿಂದ ನಾವು ಪ್ರಗತಿ ಹೊಂದುತ್ತೇವೆ.

–ನಮ್ಮ ಪ್ರಗತಿಯೊಂದಿಗೆ "ಕೇಂದ್ರ" ದ ಅರ್ಥವು ಒಂದು ಸ್ಥಳಕ್ಕೆ ಸೀಮಿತವಾಗಿರದೆ ಸರ್ವವ್ಯಾಪಿಯಾಗುತ್ತದೆ.



ಕೊನೆಗೆ ಸಾರಾಂಶವು ಹೀಗಿತ್ತು; ಅವರು ನಮ್ಮ ಮೇಲೆ ಮಾಡುತ್ತಿರುವ ಕಾರ್ಯಕ್ಕೆ ನಮ್ಮ ಮಾನವ ಸಂಕಲ್ಪದಿಂದ ಅಡ್ಡಿಯನ್ನುಂಟು ಮಾಡದಂತೆ ಅವರಿಗೆ ಸಹಕಾರ ನೀಡುವುದು ಹಾಗೂ ನಿಬಂಧನರಹಿತವಾಗಿ ನಮ್ಮ ಒಳಿತಿಗೋಸ್ಕರ ಅವರ ಆಜ್ಞೆ ಪಾಲಿಸುವುದೆ ನಮ್ಮ ಕೊಡುಗೆಯಾಗಿದೆ.

## ನಾಯಕತ್ವ ಕೌಶಲ್ಯದ ಮೇಲೆ ನಡೆದ ಸೃಜನಾತ್ಮಕ ಕಾರ್ಯಾಗಾರ

ಆಸಕ್ತ ಸ್ವಯಂ ಸೇವಕರಿಗಾಗಿ 22 ಜೂನ್ 2008ರಂದು ನಡೆದ ನವೀನ ರೀತಿಯ ಕಾರ್ಯಾಗಾರವು ಬರೋಡ ಆಶ್ರಮದಲ್ಲಿ ನಡೆಯಿತು. ಮೂರು ಜನ ಪ್ರಶಿಕ್ಷಕರು ಸೇರಿದಂತೆ 25 ಅಭ್ಯಾಸಿಗಳಿಗಾಗಿ ಇದನ್ನು ಔದ್ಯೋಗಿಕ ರಂಗದ ವೃತ್ತಿಪರ ತರಬೇತಿದಾರರು ನಡೆಸಿಕೊಟ್ಟರು.

ಪರಿಣಾಮಕಾರಿ ಸಂಭಾಷಣೆ, ರಚನಾತ್ಮಕ ಸಮಸ್ಯಾ ಪರಿಹಾರ, ಕೆಲಸ ಹಾಗು ಜನಗಳ ಚಿಂತನೆಯೊಂದಿಗೆ ನಾಯಕತ್ವದ ಬಗ್ಗೆ ಅರಿವು ಹಾಗು ಸಾಂದರ್ಭಿಕ ನಾಯಕತ್ವದ ಅಗತ್ಯಗಳು. ಈ ಕೌಶಲ್ಯಗಳನ್ನು ಉದ್ದೇಶಿಸಿ ಹೇಳಲಾಯಿತು. ಭಾಗವಹಿಸಿದವರು ಲೌಕಿಕವಾಗಿ ಕಾಣುವ ಸಮಸ್ಯೆಗಳನ್ನು ಸೃಜನಶೀಲವಾಗಿ ಪರಿಹರಿಸುವುದರ ಬಗ್ಗೆ ಯೋಚಿಸುವುದು, ಹಾಗೆ ಮಾಡುವಾಗಿನ ಅನುಭವಗಳನ್ನು ಹಂಚಿಕೊಳ್ಳುವುದು ಮತ್ತು ಪಾಠಗಳನ್ನು ತಿಳಿದುಕೊಳ್ಳುವಂತೆ ಮಾಡಲಾಯಿತು. ಪಾಲ್ಗೊಂಡವರೆಲ್ಲರೂ ದೊಡ್ಡ ಉತ್ಸವಗಳೂ ಸೇರಿದಂತೆ ಮಿಷನ್ನಿನ ಚಟುವಟಿಕೆಗಳಲ್ಲಿ ಸೇವೆ ಸಲ್ಲಿಸುವಾಗ ಬೇಕಾಗುವ ನಾಯಕತ್ವ ಗುಣಗಳಿಗೂ ಈ ಸಂದರ್ಭಗಳಿಗೂ ಸಂಬಂಧ ಕಲ್ಪಿಸಲು ಪ್ರಯತ್ನಿಸಿದರು.

## ಅಹಮದಾಬಾದ್‌ನಲ್ಲಿ ಯುವ ಪೀಳಿಗೆಗಾಗಿ ಸುಧಾರಿತ ತರಬೇತಿ



ಜೂನ್ 22, 2008ರಂದು ನಡೆದ ಗುಜರಾತ್‌ನ 45 ಯುವ ಅಭ್ಯಾಸಿಗಳನ್ನೊಳಗೊಂಡ ವಲಯ ಮಟ್ಟದ ಕಾರ್ಯಮದ ವಿಷಯ ಉತ್ಸುಕತೆ ಬದಲಾವಣೆ ತರಬಲ್ಲದು ಎಂಬುದಾಗಿತ್ತು. ಭಾಗವಹಿಸಿದವರನ್ನು 5 ತಂಡಗಳನ್ನಾಗಿ ವಿಂಗಡಿಸಿ ಅವರನ್ನು ಕಿರು ನಾಟಕ, ಗುಂಪು ಚರ್ಚೆ, ಆಶು ಭಾಷಣ ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರಶಿಕ್ಷಕರು ನೆರವಾದರು. ಸಾಂಸ್ಕೃತಿಕ ಕಾರ್ಯಕ್ರಮದ ನಂತರ ರಾತ್ರಿಯೂಟದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಕಾರ್ಯಕ್ರಮದ ವಿಷಯದೊಂದಿಗೆ ಮಿಳಿತವಾದಂತೆ ಉತ್ಸಾಹ ಮತ್ತು ಮಾಧುರ್ಯವು ಅಲ್ಲಿನ ಪರಿಸರದಲ್ಲಿ ತುಂಬಿದ್ದನ್ನು ಪ್ರಮುಖವಾಗಿ ಗಮನಿಸಲಾಯಿತು. ಕಾರ್ಯಕ್ರಮವನ್ನು ನಡೆಸಿಕೊಟ್ಟ ಹಿರಿಯರು ಅದಕ್ಕೆ ಹೊರತಾಗಿರಲಿಲ್ಲ.

## ತಮಿಳುನಾಡಿನ ನೈವೇಲಿಯಲ್ಲಿ ನಡೆದ ಆಧ್ಯಾತ್ಮಿಕ ಕೂಟ

ನೈವೇಲಿಯು ಅದರ ಲಿಗ್ನೈಟ್ ಗಣಿಗಳಿಂದ ಪರಿಚಿತ. ಮಿಷನ್ನಿನ ಇಲ್ಲಿನ ಕೇಂದ್ರವು ಅಭ್ಯಾಸಿಗಳಿಗಾಗಿ ಜೂನ್ 29, 2008ರಂದು ಪೂರ್ಣ ದಿನದ ಕಾರ್ಯಕ್ರಮವನ್ನು ಆಯೋಜಿಸಿತ್ತು. ಸ್ಥಳೀಯ ಮತ್ತು ಸುತ್ತ ಮುತ್ತಲಿನ ಕೇಂದ್ರಗಳಾದ ಕಡಲೂರು, ಪಾಂಡಿಚ್ಚೇರಿ, ವಿಳುಪ್ಪುರಂ, ವೃದ್ಧಾಚಲಂ ಮತ್ತು ಪನ್ರುತಿಯ ಸುಮಾರು 140 ಅಭ್ಯಾಸಿಗಳು ಮತ್ತು 15 ಮಕ್ಕಳು ಭಾಗವಹಿಸಿದ್ದರು.

ಮೂರು Mಗಳ ಬಗ್ಗೆ ನಡೆಸಿದ ಕ್ವಿಜ್‌ನೊಂದಿಗೆ ಅಭ್ಯಾಸಿಗಳು ಮಾಡಿದ ಪ್ರೇಮ, ಸಹನೆ, ವಚನ ಬದ್ಧತೆ ಮತ್ತು ಸಹೋದರತ್ವದ ಬಗೆಗಿನ ಕಿರು ಭಾಷಣಗಳು ಆಸಕ್ತಿ ಮತ್ತು ಸಹಭಾಗಿತ್ವವನ್ನು ಹೊರತಂದವು. ಅಭ್ಯಾಸಿಗಳು ಪ್ರಸ್ತುತ ಪಡಿಸಿದ ಕಿರು ನಾಟಕವು ಸೇರಿದಂತೆ ಒಬ್ಬ ಅಭ್ಯಾಸಿ ದಂಪತಿಯ ಪಾರಿವಾರಿಕ ಜೀವನದಲ್ಲಿ ಸಹಜಮಾರ್ಗದ ಪ್ರಭಾವದ ಬಗೆಗಿನ ಸಂದರ್ಶನವು ಅನುಭವಗಳನ್ನು ಹಂಚಿಕೊಳ್ಳುವ ಒಂದು ಪರಿಣಾಮಕಾರಿ ಮಾರ್ಗವಾಗಿತ್ತು.

ಸತ್ಸಂಗದ ಅರ್ಥದ ಬಗೆಗಿನ ಇಬ್ಬರು ಅಭ್ಯಾಸಿಗಳ ಪ್ರಸ್ತುತಿಯು ಕಿರೀಟಪ್ರಾಯವಾಯಿತು. ಅದರ ನಂತರ ಚರ್ಚೆಗಳು ಮತ್ತು ಸ್ಪಷ್ಟೀಕರಣಗಳು ನಡೆದವು.







## ತರಬೇತಿ ಕಾರ್ಯಕ್ರಮಗಳು

### ಧನ್‌ಬಾದ್

ಕೋಲ್ಕತ್ತ, ರಾಣಿಗಂಜ್, ಧನ್‌ಬಾದ್, ಸಿಂಧ್ರಿ, ಬೊಖಾರೋ ಹಾಗು ಗಿರಿದಿಹ್‌ನಿಂದ ಬಂದ ಸುಮಾರು 80 ಅಭ್ಯಾಸಿಗಳು 28 ಮತ್ತು 29 ಜೂನ್ ರಂದು ನಡೆದ 2 ದಿನಗಳ ಕಾರ್ಯಕ್ರಮಕ್ಕೆ ಹಾಜರಿದ್ದರು. ಧನ್‌ಬಾದ್ ಕೇಂದ್ರದ ವ್ಯಸ್ಥಾಪಕ ಸಹೋದರ ವೈ.ಪಿ.ಕೆ. ಮೂರ್ತಿಯವರಿಗೆ ಇತರ ಕೇಂದ್ರಗಳ ಪ್ರಶಿಕ್ಷಕರು ಮತ್ತು ಅಭ್ಯಾಸಿಗಳು ನೆರವಾದರು.

ಮೊದಲ ದಿನದ ಪ್ರಸ್ತುತಿಯ ಪ್ರಧಾನ ಅಂಶಗಳು ಶುದ್ಧೀಕರಣ, ಧ್ಯಾನ ಮತ್ತು ಪ್ರಾರ್ಥನೆಗಳಾಗಿದ್ದವು. ಸಂಜೆ  ಸಹಜಮಾರ್ಗ ಪದ್ಧತಿ, ಜೀವನದ ಒಂದು ಹಾದಿ ಬಗ್ಗೆ ಮುಕ್ತ ಸಭೆಯನ್ನು ನಡೆಸಲಾಯಿತು. ಪ್ರಶಿಕ್ಷಕರ ಭಾಷಣಗಳ ನಂತರ ಪ್ರಶಿಕ್ಷಕರ ಮತ್ತು ಅತಿಥಿಗಳ ನಡುವಿನ ಅನೌಪಚಾರಿಕ ಮಾತುಕತೆಯು ಕುತೂಹಲಕಾರಿಯಾಗಿತ್ತು.

ಎರಡನೇ ದಿನದಂದು ನಡೆದ ಪ್ರಶ್ನೋತ್ತರ ಭಾಗದ ನಂತರ ಸಹಜ ಮಾರ್ಗ ಸೇರುವುದಕ್ಕೆ ಮೊದಲು ಮತ್ತು ನಂತರ ಎಂಬ ವಿಷಯದ ಮೇಲೆ ಚರ್ಚೆಯು ಗುಂಪುಗಳಲ್ಲಿ ನಡೆಯಿತು. ಅಭ್ಯಾಸಿಗಳು ಹೃದಯ ತೆರೆದು ಮಾತನಾಡಿದ್ದರಿಂದ ಈ ಚರ್ಚೆಯು ಪರಿಯಾಮಕಾರಿಯಾಗಿ ಯಶಸ್ವಿಯಾಯಿತು. ಅವರ ಅನುಭವಗಳಲ್ಲಿ ಪವಾಡಗಳೆ ತುಂಬಿದ್ದವು ಮತ್ತು ನಾವು ಸಹಜಮಾರ್ಗ ಸೇರಿದ ದಿನದಿಂದಲೇ ಎಲ್ಲಾ ಸಂಬಂಧಗಳಲ್ಲೂ ಗುರುಗಳು ನಮ್ಮೊಂದಿಗೆ ಇರುತ್ತಾರೆ ಎಂಬ ಸತ್ಯವನ್ನು ನಿಸ್ಸಂಶಯವಾಗಿ ಮನಗಾಣಲಾಯಿತು.

### ತೀನ್ಸುಖಿಯ





ತೀನ್ಸುಖಿಯಾದ 200ಕ್ಕೂ ಹೆಚ್ಚಿನ ಅಭ್ಯಾಸಿಗಳೂ ಮತ್ತು ಸುತ್ತ ಮುತ್ತಲಿನ ದಿಬ್ರೂಗಢ, ಸಿಬ್ಸಾಗರ್, ನಜೀರಾ, ದಿಗ್ಬೋಯಿ, ದೂಮ್‌ದೂಮ, ನಹರ್‌ಕಟಿಯ, ದುಲಿಯಾಂಜನ್, ಅರುಣಾಚಲ ಕೇಂದ್ರಗಳ ಅಭ್ಯಾಸಿಗಳು ಜೂನ್ 29ರಂದು ತೀನ್ಸುಖಿಯಾದಲ್ಲಿ ನಡೆದ ಅಭ್ಯಾಸಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗುರುಗಳ ನೋವು, ಸದಾಚಾರ, ಸಹಜಮಾರ್ಗ ಸಾಧನೆಯ ಮೇಲಿನ ಪ್ರಸ್ತುತಿಗಳ ನಂತರ ಪ್ರಶ್ನೋತ್ತರಗಳು ನಡೆದವು. ಕಾರ್ಯಕ್ರಮದ ಸಂಘಟಕರಾದ ಸಹೋದರ ಅಶೋಕ್ ಗುಪ್ತಾರವರು ಗುರುಗಳ ಸೂಕ್ತಿಗಳಲ್ಲಿ ಒಂದನ್ನು ಉಲ್ಲೇಖಿಸಿದರು "ನಾವು ಏನನ್ನೇ ಪಡೆದರೂ ಅದನ್ನು ಬೇರೆಯವರಿಗೆ ಹಂಚಬೇಕು". ಅವರು ಗುರುಗಳು ಇತ್ತೀಚಿನ ಗೋವಾ ಭೇಟಿಯಲ್ಲಿ ಹೇಳಿದಂತೆ ಪ್ರತಿಯೊಬ್ಬ ಅಭ್ಯಾಸಿಯು ವರ್ಷಕ್ಕೆ ಒಬ್ಬ ಹೊಸ ಅಭ್ಯಾಸಿಯನ್ನು ಕರೆತಂದರೆ ಮಿಷನ್ನಿನ ಬೆಳವಣಿಗೆ ಸುಲಭವಾಗಿ ಆಗುತ್ತದೆ ಎಂದೂ ಹೇಳಿದರು.

ಭಾವ ಚಿತ್ರಗಳ ಮೂಲಕ ಬಾಬೂಜಿಯವರು ಹಲವಾರು ಬಾರಿ ತೀನ್ಸುಖಿಯಾಗೆ ಭೇಟಿ ನೀಡಿದ್ದನ್ನು ಹಾಗೂ ಅವರು ಈ ಪ್ರದೇಶಕ್ಕಾಗಿ ಕಂಡ ಕನಸುಗಳನ್ನು ಇದುವರೆಗೆ ನಾವು ಪೂರ್ಣ ಮಾಡಲಾರದೆ ಹೋಗಿದ್ದೇವೆ ಆದರೂ ಆ ಕೆಲಸವನ್ನು ಇಂದೇ, ಇಲ್ಲಿಯೇ ಕೈಗೆತ್ತಿಕೊಂಡರೆ, ಗುರುಗಳ ಆಶೀರ್ವಾದದಿಂದ ಅವರ ಕನಸುಗಳನ್ನು ಸಾಕಾರಗೊಳಿಸಬಹುದು ಎಂಬುದನ್ನು ಅವರು ಉಲ್ಲೇಖಿಸಿದರು.

### ಗುಲ್ಬರ್ಗ

ಹೊಸ ಅಭ್ಯಾಸಿಗಳಿಗಾಗಿ ಒಂದು ದಿನದ ಕಾರ್ಯಕ್ರಮವನ್ನು ಗುಲ್ಬರ್ಗ ಆಶ್ರಮದಲ್ಲಿ ಜುಲೈ 6ರಂದು ನಡೆಸಲಾಯಿತು. 25 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಸಹಜಮಾರ್ಗ ಸಾಧನೆಯ ಮೂಲ ತತ್ವಗಳನ್ನು ಪೂರ್ಣವಾಗಿ ಅರ್ಥೈಸಿಕೊಳ್ಳುವುದಕ್ಕೆ ಒತ್ತು ನೀಡಲಾಗಿತ್ತು. ಭಾಷಣಗಳೊಂದಿಗೆ ಸಂದೇಹ ನಿವಾರಣೆಗಾಗಿ ಪ್ರಶ್ನೋತ್ತರವನ್ನು ಕೈಗೊಳ್ಳಲಾಯಿತು.



### ದೆಹಲಿ ಕೇಂದ್ರದ ಯುವ ಕಾರ್ಯಾಗಾರ

ಜುಲೈ 6, 2008 ರಂದು ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಿದ ಯುವ ಅಭ್ಯಾಸಿಗಳಿಗೆ ಅದೊಂದು ಹೊಸ ಚೈತನ್ಯದಾಯಕ ಅನುಭವವಾಗಿತ್ತು. ಇದಕ್ಕೆ ಆಯ್ದುಕೊಂಡ ವಿಷಯವು "ನೀವು ಏನನ್ನೇ ಸಾಧಿಸಬೇಕೆಂದಿದ್ದರೂ ಅದು ಇಲ್ಲೇ, ಈಗಲೇ". ಭಾಗಿಗಳನ್ನು ಸಂಘಟಕರು 8 ತಂಡಗಳನ್ನಾಗಿ ವಿಂಗಡಿಸಿದರು. ಅಲ್ಲಿ ಚರ್ಚಿಸಲ್ಪಟ್ಟ ವಿಷಯಗಳೆಂದರೆ ಸಮತೋಲನ, ಪ್ರೇಮ, ನಂಬಿಕೆ (ವಿಶ್ವಾಸ), ಆತ್ಮಸ್ಥೈರ್ಯ, ಇಲ್ಲೇ ಮತ್ತು ಈಗಲೇ, ಶಿಸ್ತು ಮತ್ತು ಸಂಯಮ. ಯುವ ಅಭ್ಯಾಸಿಗಳು ಸ್ವಾಮಿ ವಿವೇಕಾನಂದರ ಕರೆ ಏಳಿ, ಜಾಗೃತಗೊಳ್ಳಿ (ಉತ್ತಿಷ್ಠ ಜಾಗೃತ)ಯ ಆಧಾರದ ಮೇಲೆ ಸ್ವಾರಸ್ಯಕರ ಕಿರು ನಾಟಕವನ್ನು ಅಭಿನಯಿಸಿದರು.

ಪ್ರಾಪಂಚಿಕ ನಾಗರೀಕತೆಯ ಎಲ್ಲಾ ಮಹತ್ವಾಕಾಂಕ್ಷೆ ಮತ್ತು ಧ್ಯೇಯಗಳು ಅಧ್ಯಾತ್ಮಿಕತೆಗೆ ಉಂಟು ಮಾಡುವ ಅಪಾಯಕ್ಕೆ ಗುರಿಯಾಗುವ ಯುವ ಜನತೆಯನ್ನು ಎಚ್ಚರಿಸುವ ಗುರುಗಳ ಭಾಷಣವನ್ನು ಕೇಳಿಸಲಾಯಿತು, ಹಾಗೂ ಈ ಕೆಲವು ನಿಯಮಗಳನ್ನು ಸೂಚಿಸಲಾಯಿತು; ಬುದ್ಧಿ ಶಕ್ತಿಯು ಬೇಧ ಮಾಡುತ್ತದೆ. ಮನಸ್ಸನ್ನು ವಿವೇಚನಾಯುತವಾಗಿ ಶಿಸ್ತಿನಿಂದ ಬಳಸಿಕೊಳ್ಳಬೇಕು. ಜೀವನದಲ್ಲಿ ಸಂತೋಷ ತರುವ ಮಹೋನ್ನತ ಅಧ್ಯಾತ್ಮಿಕ ಕಾರ್ಯಕ್ಕೆ ಮಹತ್ವ ಕೊಡುತ್ತ ಪ್ರತಿ ದಿನವನ್ನು ಜೀವಿಸಬೇಕು.

### ಸಿಲಿಗುರಿ

ಕಾರ್ಯಾಗಾರದಲ್ಲಿ ಭಾಗವಹಿಸಿದ ಸಿಲಿಗುರಿ ಮತ್ತು ಅಕ್ಕಪಕ್ಕದ ಕೇಂದ್ರಗಳಾದ ರಾಯ್‌ಗಂಜ್, ದಾರ್ಜಿಲಿಂಗ್, ಬಿಜೋನ್ಬರಿ ಮತ್ತು ಗ್ಯಾಂಗ್‌ಟಾಕ್‌ನ 50 ಅಭ್ಯಾಸಿಗಳಲ್ಲಿದ್ದ ಸಹಜಮಾರ್ಗ ಸಾಧನೆಯ ತಿಳಿವಳಿಕೆಯ ಕುರಿತು ಇದ್ದ ಸಂದೇಹ ನಿವಾರಣೆಯಾಯಿತು. ಜೂನ್ 7 ಮತ್ತು 8, 2008ರಂದು ಸಿಲಿಗುರಿಯ ರಿಶಿ ಭವನದಲ್ಲಿ ಸಹಜಮಾರ್ಗ ಸಾಧನೆಯ ಮೇಲೆ ಕಾರ್ಯಾಗಾರ ನಡೆಸಲಾಯಿತು. ವೈಯಕ್ತಿಕ ಬೈಠಕ್‌ಗಳು ಮತ್ತು ಸತ್ಸಂಗದ ಹೊರತಾಗಿ ದೈನಿಕ ಸಾಧನೆ, ಸತತ ಸ್ಮರಣೆ ಮತ್ತು ಹತ್ತು ನಿಯಮಗಳ ಬಗ್ಗೆ ತಿಳಿಯಪಡಿಸಲಾಯಿತು. ಹೊಸ ಅಭ್ಯಾಸಿಗಳಿಗೆ ತಮ್ಮ ಸಂದೇಹ, ಗೊಂದಲಗಳು ನಿವಾರಣೆಯಾಗಲು ಈ ಕಾರ್ಯಾಗಾರ ಬಹಳ ಉಪಯುಕ್ತವಾಯಿತು. ಅನೇಕ ಅಭ್ಯಾಸಿಗಳು ಕಾಲಕಾಲಕ್ಕೆ ಇಂತಹ ಕಾರ್ಯಕ್ರಮಗಳು ನಡೆಯುತ್ತಿರಬೇಕೆಂದು ಅಭಿಪ್ರಾಯಪಟ್ಟರು.

## ಮುಕ್ತ ಸಭೆಗಳು

### ದಿಬ್ರೂಗಢ:

ದಿಬ್ರೂಗಢ ಕೇಂದ್ರದಲ್ಲಿ 28 ಜೂನ್ 2008ರಂದು ಸಹೋದರ ದೂಂಗರ್ ಮಲ್ ಅಗರ್ವಾಲ್‌ರವರು ಮುಕ್ತ ಸಭೆಯನ್ನು ಆಯೋಜಿಸಿದ್ದರು. ಅಂದಿನ ಸಭೆಗೆ 33 ಜನ ಅತಿಥಿಗಳು ಆಗಮಿಸಿದ್ದರು ಹಾಗೂ ಅವರಲ್ಲಿ ಒಂಭತ್ತು ಜನ ಕೂಡಲೇ ಬೈಠಕ್‌ಗಳನ್ನು ತೆಗೆದುಕೊಂಡರಲ್ಲದೆ ಕೆಲವರು ಶೀಘ್ರವೇ ಸಾಧನೆಯನ್ನು ಪ್ರಾರಂಭಿಸುವ ಆಸಕ್ತಿ ತೋರಿದರು. ಗುವಹಾಟಿ ಕೇಂದ್ರದ ಸಹೋದರ ಅಶೋಕ್ ಗುಪ್ತರವರು ಈ ಮುಕ್ತ ಸಭೆಯನ್ನು ನಿರ್ವಹಿಸಿದ್ದರು.

### ನಂದ್ಯಾಲ್, ಆಂಧ್ರಪ್ರದೇಶ:

ನಂದ್ಯಾಲದ ಪುರಸಭಾ ಪ್ರೌಢ ಶಾಲೆಯಲ್ಲಿ ಸುಮಾರು 150 ಶಿಕ್ಷಕರಿಗಾಗಿ ನಿರ್ವಹಿಸಲಾದ ಯೋಗ ಮತ್ತು ಧ್ಯಾನದ ಮೇಲಿನ ಪರಿಚಯ ಕಾರ್ಯಕ್ರಮವು ಮೂರು ತಂಡಗಳಾಗಿ 4ರಿಂದ 8ನೇ ಜೂನ್‌ವರೆಗೆ ನಡೆಯಿತು. ಹೇಗೆ 'ಸಮತೋಲಿತ ಮತ್ತು ಒತ್ತಡವಿಲ್ಲದ ಜೀವನ' ನಡೆಸಬೇಕೆಂಬ ವಿಷಯಗಳನ್ನು ವ್ಯಾಪಕವಾಗಿ ಚರ್ಚಿಸಲಾಯಿತು. 26 ಜೂನ್‌ರಂದು ನಂದ್ಯಾಲದ ಪುಲ್ಲೋಜೀ ರಾವ್ ಕಾಲೇಜಿನಲ್ಲಿ ನಮ್ಮ ಅಭ್ಯಾಸಿ ಸಹೋದರರು ಸಹಜಮಾರ್ಗ ಪದ್ಧತಿಯು ಹೇಗೆ ಶಿಕ್ಷಣೋದ್ಯಮದಲ್ಲಿ ಉಪಯುಕ್ತ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಹೇಗೆ ವಿದ್ಯಾರ್ಥಿಗಳಿಗೆ ಬೋಧಿಸಬೇಕು? ಎಂಬ ವಿಷಯದೊಂದಿಗೆ ಕಾರ್ಯಕ್ರಮವನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ತರಬೇತಿಯಲ್ಲಿದ್ದ 60 ಅಧ್ಯಾಪಕರು ಭಾಗವಹಿಸಿದ್ದರು.

### ಮಂಡಮರ್ರಿ, ಆಂಧ್ರಪದೇಶ:

ಕಾರ್ಮೆಲ್ ಪ್ರೌಢ ಶಾಲೆ, ಕ್ರೈಸ್ತ ಮಿಷನ್ನರಿಯ ಆಡಳಿತ ಸಮಿತಿಯ ಕೋರಿಕೆಯ ಮೇರೆಗೆ 70 ಶಿಕ್ಷಕರ ಸಲುವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈಗಾಗಲೆ ಅಭ್ಯಾಸಿಗಳಾಗಿರುವ ಕೆಲವು ಶಿಕ್ಷಕರು ಧ್ಯಾನದ ಅಗತ್ಯ ಮತ್ತು ವೈಯಕ್ತಿಕ ಅನುಭವಗಳನ್ನು ಪ್ರಸ್ತುತ ಪಡಿಸಿದರು. ಶಾಲೆಯ ಸೂಚನಾ ಫಲಕದಲ್ಲಿ ಮಿಷನ್ನಿನ ಪ್ರಾರ್ಥನೆಯನ್ನು ಪ್ರದರ್ಶಿಸಲಾಗಿತ್ತು.

### ಬರೋಡ, ಗುಜರಾತ್:



ಜುಲೈ 6, 2008ರ ಭಾನುವಾರದಂದು ಅಲ್ಕಾಪುರಿಯ ಬರೋಡ ಪ್ರೌಢ ಶಾಲೆಯ ಸಭಾಂಗಣದಲ್ಲಿ 90 ಜನ ಶಿಕ್ಷಕರು ಮತ್ತು ಇತರ ಅತಿಥಿಗಳಿಗಾಗಿ ಮುಕ್ತ ಸಭೆಯನ್ನು ನಡೆಸಲಾಯಿತು. ಇದರಲ್ಲಿ ಹೇಳಲಾದ ವಿಷಯಗಳೆಂದರೆ ವ್ಯಕ್ತಿಯ ಜೀವನದಲ್ಲಿ ಅಧ್ಯಾತ್ಮದ ಅಗತ್ಯ ಮತ್ತು ಧ್ಯಾನದ ಔಚಿತ್ಯ, ಸಹಜಮಾರ್ಗದ ಸಾಧನೆಯ ಪ್ರಮುಖ ಲಕ್ಷಣಗಳು ಮತ್ತು ಮಾನವನ ಮನಸ್ಸಿನ ಮೇಲೆ ಅದರ ಪರಿಣಾಮ ಹಾಗೂ ಕೊನೆಯದಾಗಿ ಸಹಜಮಾರ್ಗ ಸಾಧನೆಯ ಮುಖಾಂತರ ಆಗಿರುವ ಬದಲಾವಣೆಯ ಬಗ್ಗೆ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುವುದು.

### ಗುಲ್ಬರ್ಗಾದ ಗ್ರಾಮೀಣ ಪ್ರದೇಶಗಳಲ್ಲಿ ಮೊದಲ ಹೆಜ್ಜೆ:



ಐನೋಳಿ ಗ್ರಾಮದಲ್ಲಿ ಒಬ್ಬ ಅಭ್ಯಾಸಿಯ ಮನೆಯ ಮಾಳಿಗೆಯ ಮೇಲೆ 25 ಅತಿಥಿಗಳನ್ನು ಒಳಗೊಂಡ ಕೂಟವು 6ನೇ ಜೂನ್, 2008ರಂದು ನಡೆಯಿತು. ಸಹಜಮಾರ್ಗದ ಕುರಿತು ಹೇಳಿದಮೇಲೆ ಈ ಪದ್ಧತಿಯ ಬಗೆಗಿನ ಪ್ರಶ್ನೆಗಳನ್ನು ಆಲಿಸಲಾಯಿತು. ಅದೇ ಪ್ರದೇಶದಲ್ಲಿನ ಕನಕಪುರ ಗ್ರಾಮದ ಅಭ್ಯಾಸಿಯೊಬ್ಬರ ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 35 ಅತಿಥಿಗಳು ಹಾಜರಿದ್ದರು. ಈ ಎರಡೂ ಕೂಟಗಳು ಪಕ್ಕಾ ಗ್ರಾಮೀಣ ಪರಿಸರದಲ್ಲಿ ನಿರ್ವಹಿಸಲಾಗಿದ್ದು ಸಹಜಮಾರ್ಗವನ್ನು ಸರಳ ಹಾಗೂ ಸ್ಪಷ್ಟ ಮಾರ್ಗದಲ್ಲಿ ಪ್ರಸ್ತುತ ಪಡಿಸಲಾಯಿತು ಹಾಗೂ ಪ್ರೇಕ್ಷಕರನ್ನು ತಮ್ಮ ಈಗಿನ ಆಚರಣೆಗಳ ಬಗ್ಗೆ ಇನ್ನೊಮ್ಮೆ ಯೋಚನೆ ಮಾಡುವಂತೆ ಪ್ರೇರೇಪಿಸಿತು.

### ಕೊಡೈಕೆನಾಲ್, ತಮಿಳುನಾಡು:

ಕೊಡೈಕೆನಾಲ್, ತಮಿಳುನಾಡಿನ ಗಿರಿಧಾಮವಾಗಿದ್ದು ಮಧುರೈನ ಉಪಕೇಂದ್ರವಾಗಿದೆ. ಮಧುರೈನ ಪ್ರಶಿಕ್ಷಕರು ಈ ಪ್ರದೇಶದಲ್ಲಿ ಮಿಷನ್ನಿನ ಬೆಳವಣಿಗೆಯ ಸಲುವಾಗಿ ಪ್ರಯತ್ನ ಪಡುತ್ತಿದ್ದಾರೆ. 12 ಜೂನ್, 2008ರಂದು 25 ಶಿಕ್ಷಕರಿಗಾಗಿ ಭವನದ ಗಾಂಧೀ ವಿದ್ಯಾಶ್ರಮ ಶಾಲೆಯಲ್ಲಿ ಸಹಜಮಾರ್ಗವನ್ನು ಪ್ರಸ್ತುತ ಪಡಿಸಲಾಯಿತು. ಪ್ರಾಂಶುಪಾಲರು ಇಚ್ಛೆಯುಳ್ಳ ಶಿಕ್ಷಕರಿಗೆ ಧ್ಯಾನ ಪ್ರಾರಂಭಿಸಲು ಅನುಕೂಲ ಮಾಡಿಕೊಡುತ್ತೇವೆ ಎಂದು ಭರವಸೆ ನೀಡಿದರು. ಪ್ರಶಿಕ್ಷಕ ಸಹೋದರ ರಾಮನಾಥನ್ ಹಾಗೂ ಕೊಡೈಕೆನಾಲ್‌ನ ಇಂದ್ರಪ್ರಸಾದ್‌ರವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಕೊಡೈಕೆನಾಲ್‌ನ ಶ್ರೀ ಶಂಕರ ವಿದ್ಯಾಲಯ ಹಿರಿಯ ಪ್ರಾಥಮಿಕ ಶಾಲೆಯವರು 20 ಶಿಕ್ಷಕರಿಗಾಗಿ ಮುಕ್ತ ಸಭೆಯನ್ನು ನಡೆಸಿಕೊಡಲು ಮಿಷನ್ನನ್ನು 8 ಆಗಸ್ಟ್, 2008ರಂದು ಆಹ್ವಾನಿಸಿದ್ದರು. ಸಹಜಮಾರ್ಗ ಪದ್ಧತಿಯ ಪ್ರಸ್ತುತಿಯ ನಂತರ ಪ್ರಾಂಶುಪಾಲರನ್ನೊಳಗೊಂಡು 13 ಶಿಕ್ಷಕರು ಪ್ರಾರಂಭಿಕ ಬೈಠಕ್‌ಗಳನ್ನು ತೆಗೆದುಕೊಳ್ಳುವ ಇಚ್ಛೆ ವ್ಯಕ್ತ ಪಡಿಸಿದರು.

### ಸಿಲಿಗುರಿ, ಪಶ್ಚಿಮ ಬಂಗಾಳ:

8 ಜೂನ್, 2008ರಂದು ಸಿಲಿಗುರಿ ಮತ್ತು ಜಲ್‌ಪೈಗುರಿಯ ಅಭ್ಯಾಸಿಗಳಿಂದ ಮುಕ್ತ ಸಭೆಯು ಜಲ್‌ಪೈಗುರಿಯ ಜಿಲ್ಲಾ ಪರಿಷತ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವು ಸ್ಥಳೀಯ ಶಾಲೆಯ ಶಿಶು ವಿಹಾರದ ಮಕ್ಕಳ ನೃತ್ಯ ಮತ್ತು ಹಾಡುಗಳಿಂದ ಪ್ರಾರಂಭವಾಯಿತು. ಪ್ರಶಿಕ್ಷಕರ ಭಾಷಣಗಳ ಹೊರತಾಗಿ ಪವರ್ ಪಾಯಿಂಟ್‌ನ ಪ್ರಸ್ತುತಿಯ ಉಪಯೋಗ ಪಡೆಯಲಾಯಿತು. 35 ಅತಿಥಿಗಳು ಹಾಜರಿದ್ದರು ಹಾಗೂ ಅನೇಕರು ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಯಸಿದರು.

# ಪ್ರಭಾ ಕೇಂದ್ರಗಳು:

## ಅಹಮದಾಬಾದ್ ಆಶ್ರಮ

ಅಹಮದಾಬಾದ್ ಗಾಂಧೀ ನಗರ ಹೆದ್ದಾರಿಯ ಮುಖಾಂತರ ಹೋಗುವ ಯಾರಿಗೂ ನವ ನಿರ್ಮಿತ ಅಹಮದಾಬಾದ್ ಆಶ್ರಮವು ಕಾಣದೇ ಇರಲಾರದು. ಗುರುಗಳು ಕಳೆದ ಬಾರಿ ಅಹಮದಾಬಾದ್‌ಗೆ ಬಂದಾಗ ಇದರ ಉದ್ಘಾಟಣೆ ಮಾಡಿದ್ದರು.

ಭಾರತದಲ್ಲಿನ ಮಿಷನ್ನಿನ ಎಲ್ಲಾ ಧ್ಯಾನ ಮಂದಿರಗಳಿಗಿಂತಲೂ ಭಿನ್ನವಾಗಿ ಇಲ್ಲಿನ ಧ್ಯಾನ ಮಂದಿರವು ಷಟ್ಕೋನಾಕೃತಿಯಲ್ಲಿದೆ. ಇದು ಆಧುನಿಕವಾಗಿಯೂ, ಮನಮೋಹಕವಾಗಿಯೂ ಕಾಣುತ್ತದೆ ಹಾಗೂ ಅತ್ಯುತ್ತಮ ಕಾರ್ಯಕ್ಷಮತೆ ಉಳ್ಳದ್ದಾಗಿದೆ .

ಅಹಮದಾಬಾದ್ ನಗರದಿಂದ 25ಕಿ.ಮಿ ದೂರದ 4.75 ಎಕರೆ ಜಾಗದಲ್ಲಿ ಸ್ಥಾಪಿತಗೊಂಡ ಆಶ್ರಮದ ಸಂಕೀರ್ಣವು 5 ಕಟ್ಟಡಗಳನ್ನು ಹೊಂದಿದೆ; ಧ್ಯಾನ ಮಂದಿರ, ಗುರುಗಳ ಕೋಣೆ, ವಿಶ್ರಾಂತಿ ಗೃಹಗಳು, ವಸತಿ ಸಮುಚ್ಛಯ, ಅಡುಗೆ ಮನೆ ಮತ್ತು ಕಛೇರಿ.



## ಧ್ಯಾನ ಮಂದಿರ:

ಧ್ಯಾನ ಮಂದಿರವು ಗುಮ್ಮಟದಂತಹ ವಲಯ ಆಕಾರದ ಕಾಂಕ್ರೀಟಿನ ಛಾವಣಿಯೊಂದಿಗೆ ಅನನ್ಯ, ಅಸಾಂಪ್ರದಾಯಿಕವಾಗಿ ರಚಿತವಾಗಿದೆ. ಇದು ಸ್ತಂಭರಹಿತವಾಗಿ ದೊಡ್ಡ ಷಟ್ಕೋನಾಕೃತಿಯ ಜಾಗ ಹೊಂದಿರುವುದರಿಂದ ಗುರುಗಳು ಭೌತಿಕವಾಗಿ ಉಪಸ್ಥಿತರಿದ್ದಾಗ ಅವರನ್ನು ಅಡೆಚಣೆ ಇಲ್ಲದೇ ನೋಡಲು ಅನುವು ಮಾಡಿಕೊಡುತ್ತದೆ.

ಪ್ರಾಕೃತಿಕವಾಗಿಯೇ ಗಾಳಿಯು ಪಕ್ಕದಿಂದ ಮೇಲಿನವರೆಗೂ ಹೋಗುವಂತೆ ರಚಿಸಲಾಗಿರುವುದರಿಂದ ಈ ಆಕಾರವು ಕಡು ಬೇಸಿಗೆಯಲ್ಲೂ ಧ್ಯಾನ ಮಂದಿರದ ಉಷ್ಣತೆಯನ್ನು ನಿಯಂತ್ರಣದಲ್ಲಿಡಲು ಸಹಕರಿಸುತ್ತದೆ. ಇಲ್ಲಿ 2000 ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ. ಅಗತ್ಯ ಬಿದ್ದಾಗ ಇನ್ನೂ 500 ಅಭ್ಯಾಸಿಗಳಿಗೆ ಸ್ಥಳಾವಕಾಶ ಕಲ್ಪಿಸಲು ಎರಡೂ ಕಡೆಗೂ ಆವರಣ ನಿರ್ಮಿಸುವ ಸಾಧ್ಯತೆಗಳಿವೆ.

## ಗುರುಗಳ ಕಾಟೇಜ್:

ಉಲ್ಲಸಿತ, ಸಾಂಪ್ರದಾಯಿಕ ಮಾದರಿಯಲ್ಲಿ ತಯಾರಾದ ಗುರುಗಳ ಕಾಟೇಜ್‌ನಲ್ಲಿ ನಡುವಿನ ಅಂಗಳವೊಂದನ್ನು ಸುತ್ತುವರೆದಂತೆ ಗುರುಗಳ ಶಯನ ಗೃಹ ಹಾಗೂ ಕಛೇರಿ, ಹಜಾರ, ಅಡುಗೆ ಕೋಣೆ ಮತ್ತು ಅತಿಥಿ ಕೋಣೆಗಳಿವೆ.

ಭಿನ್ನ ರೀತಿಯಲ್ಲಿ ಇಳಿಮುಖವಾಗಿ ರಚಿತವಾದ ಕಾಟೇಜಿನ ಛಾವಣಿಯ ಒಳಗಿನ ಕಡೆ ಮರದ ಮೆರುಗು ನೀಡಿದ್ದರೆ ಹೊರಗಡೆ ಮಂಗಳೂರು ಹೆಂಚುಗಳನ್ನು ಹಾಕಲಾಗಿದೆ.



## ಅಭ್ಯಾಸಿಗಳ ಮಲಗುವ ಕೋಣೆಗಳು:

ಒಂದೇ ಅಳತೆಯ 6 ಘಟಕಗಳ ಎರಡು ಅಂತಸ್ತಿನ ಕೋಣೆಗಳು 75 ಅಭ್ಯಾಸಿಗಳಿಗೆ ಆರಾಮವಾಗಿ ಸ್ಥಳಾವಕಾಶ ನೀಡಬಲ್ಲದು. ಮಲಗುವ ಕೋಣೆಗಳ ಒಂದು ತುದಿಗೆ ಅಭ್ಯಾಸಿಗಳಿಗೂ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಗೂ ವೈದ್ಯಕೀಯ ಚಿಕಿತ್ಸೆ ನೀಡಲು ಅಭ್ಯಾಸಿ ವೈದ್ಯರುಗಳನ್ನು ಒಳಗೊಂಡ ಚಿಕ್ಕ ವೈದ್ಯಶಾಲೆ ಇದೆ.

ತರಬೇತಿ ಕಾರ್ಯಕ್ರಮಗಳು ಮತ್ತು ಸಭೆ ಸಮಾರಂಭಗಳಿಗೆ ಸೇವೆ ಒದಗಿಸಲು ಆರು ಘಟಕಗಳಲ್ಲಿನ ಒಂದು ಘಟಕದಲ್ಲಿ ಸುಸಜ್ಜಿತ ಧ್ವನಿ ಮತ್ತು ದೃಶ್ಯ ಸಲಕರಣೆಗಳಿವೆ.

ಅಡುಗೆಕೋಣೆಯು ವಿಶಾಲವಾಗಿದ್ದು ದಾಸ್ತಾನಿಗೆ ಹಾಗೂ ಪಾತ್ರೆ ತೊಳೆಯಲು ಅನುಕೂಲವಾಗುವಂತೆ ಸಾಕಷ್ಟು ಸ್ಥಳವನ್ನು ಒದಗಿಸಲಾಗಿದೆ. ಅಡುಗೆಕೋಣೆಯ ಮೇಲೆ ಆಶ್ರಮದ ವ್ಯವಸ್ಥಾಪಕರ ಮನೆ ಹಾಗೂ ಸುಸಜ್ಜಿತ ಕಛೇರಿಗಳೂ ಇವೆ.

ಅಪಾರ್ಟ್‌ಮೆಂಟ್ ಭಾಗವು ಐ ಆಕಾರದಲ್ಲಿದ್ದು ಕೆಳ ಅಂತಸ್ತು ಹಾಗೂ ಒಂದನೇ ಮಹಡಿಗಳಲ್ಲಿ ಎರಡು ಮಲಗುವ ಕೋಣೆಗಳ 6 ಮನೆಗಳು ಹಾಗೂ ಒಂಟಿ ಕೋಣೆಯ 9 ಮನೆಗಳಿವೆ.



## ಭವಿಷ್ಯದ ಯೋಜನೆ:

ಆಶ್ರಮವು-ಒಂದು ಊಟದ ಮನೆ, ಮಕ್ಕಳಿಗೆ ಆಟದ ಮೈದಾನ, ಸಹಾಯಕರಿಗೆ ಮತ್ತು ನೌಕರರಿಗೆ ವಸತಿ, ಮಳೆ ಕೊಯ್ಲು, ಹುಲ್ಲು ಹಾಸು, ಮರ ಗಿಡಗಳ ಹೆಚ್ಚಳ ಹಾಗೂ ಯೋಗ್ಯ ಸಂಗ್ರಹವುಳ್ಳ ಗ್ರಂಥಾಲಯಗಳನ್ನು ಸೇರಿಸುವ ಯೋಜನೆ ಹಾಕಿಕೊಂಡಿದೆ.

ಒಟ್ಟಿನಲ್ಲಿ ಅಹಮದಾಬಾದ್‌ನ ಆಶ್ರಮವು ಭಾರತದಲ್ಲಿರುವ ಮಿಷನ್ನಿನ ಆಶ್ರಮಗಳ ಸಾಲಿನಲ್ಲಿ ಸೇರಿದ ಮತ್ತೊಂದು ರತ್ನವಾಗಿದೆ. ಗುರುಗಳ ಕೃಪೆಯಿಂದ ಭಾರತದ ಈ ಭಾಗದಲ್ಲಿ ಮಾನವ ಕುಲದ ಮೇಲೆ ತೀವ್ರ ಆಧ್ಯಾತ್ಮಿಕ ಪ್ರಭಾವ ಬೀರುವ ಮೂಲವಾಗುವುದರಲ್ಲಿ ಸಂಶಯವಿಲ್ಲ.

**To subscribe to this Newsletter please visit http://www.srcm.org/centers/as/in/newsletter/index.jsp**
**For feedback, suggestions and news articles please send email to in.newsletter@srcm.org**

© 2008 Shri Ram Chandra Mission ("SRCM"). All rights reserved.
“Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.
This message may be edited for content and is intended exclusively for the members of SRCM.